# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 184
ಸದಸ್ಯರ ಹೆಸರು : ಶ್ರೀ ಡಿ.ಎಸ್.ಅರುಣ್
(ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಉತ್ತರಿಸಬೇಕಾದ ದಿನಾಂಕ : 04-07-2023
ಉತ್ತರಿಸಬೇಕಾದ ಸಚಿವರು : ನಗರಾಭಿವೃದ್ಧಿ ಸಚಿವರು

| | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದ ಮಹಾನಗರ ಪಾಲಿಕೆಗಳಲ್ಲಿ ಟ್ರೇಡ್ ಲೈಸನ್ಸ್ ಪರವಾನಿಗೆ ನವೀಕರಣ ಕಾಲಮಿತಿಯನ್ನು ಪ್ರತಿ 5 ವರ್ಷಗಳ ಬದಲಿಗೆ ಒಂದು ಪೂರ್ಣಾವಧಿಗೆ ಎಂದು ತಿದ್ದುಪಡಿ ಮಾಡುವ ಯೋಚನೆ ಸರ್ಕಾರದ ಮುಂದಿದೆಯೇ; ಅಥವಾ ಹಿಂದಿನ ಪದ್ಧತಿಯನ್ನು ರದ್ದು ಮಾಡಬೇಕೆನ್ನುವ ಟ್ರೇಡರ್‌ದಾರರ ಮನವಿಯನ್ನು ಪರಿಗಣಿಸಲು ಸರ್ಕಾರ ಸಮ್ಮತಿಸುವುದೇ; | ಕರ್ನಾಟಕ ಪೌರನಿಗಮಗಳ ಅಧಿನಿಯಮ 1976ರ ಕಲಂ 353ರಂತೆ ಗರಿಷ್ಠ 5 ವರ್ಷಗಳ ಅವಧಿಯವರೆಗೆ ಉದ್ದಿಮೆ ಪರವಾನಿಗೆ ನೀಡಲು ಅವಕಾಶವಿರುತ್ತದೆ. ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ 25 ತುಮಪಾ 2022(ಇ), ದಿ: 20.10.2022 ರಂತೆ ರಾಜ್ಯದ ಮಹಾನಗರ ಪಾಲಿಕೆಗಳು (ಬಿಬಿಎಂಪಿ ಹೊರತುಪಡಿಸಿ) ಗರಿಷ್ಠ 5 ವರ್ಷಗಳ ಅವಧಿಯವರೆಗೆ ಸರಳವಾಗಿ ಆನ್‌ಲೈನ್ ಮೂಲಕ ಉದ್ದಿಮೆ ಪರವಾನಿಗೆಯನ್ನು ಮಂಜೂರು / ನವೀಕರಣ ಮಾಡಿಕೊಳ್ಳುವ ಬಗ್ಗೆ ಅಧಿಸೂಚನೆಯನ್ನು ಹೊರಡಿಸಲಾಗಿದೆ.<br><br>ರಾಜ್ಯದ ಮಹಾನಗರ ಪಾಲಿಕೆಗಳಲ್ಲಿ ಟ್ರೇಡ್ ಲೈಸೆನ್ಸ್ ನವೀಕರಣ ಕಾಲಮಿತಿಯನ್ನು ಪ್ರತಿ 5 ವರ್ಷಗಳ ಬದಲಿಗೆ ಒಂದು ಪೂರ್ಣಾವಧಿಗೆ ಎಂದು ತಿದ್ದುಪಡಿ ಮಾಡುವ ಯಾವುದೇ ಪ್ರಸ್ತಾವನೆ ಸರ್ಕಾರದ ಮುಂದಿರುವುದಿಲ್ಲ. |
| ಆ) | ಈ ಕುರಿತು ಸಭೆ ಜರುಗಿದ್ದಲ್ಲಿ ಅಥವಾ ನಿರ್ಣಯ ಕೈಗೊಂಡಿದ್ದಲ್ಲಿ ಮಾಹಿತಿ ಒದಗಿಸುವುದು? | ಮೇಲಿನ ಉತ್ತರದನ್ವಯ ಉದ್ಭವಿಸುವುದಿಲ್ಲ. |

ಸಂಖ್ಯೆ: ನಅಇ 135 ಎಂಎಸ್‌ಇ 2023(ಇ)

(ಬಿ.ಎಸ್.ಸುರೇಶ)
ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು